ವಾರವೊಪ್ಪತ್ತು ಆಗಬೇಕಿತ್ತು. ಇವತ್ತಾದರೂ ಬಟವಾಡೆ ಆಗಬಹುದೆಂದು ಕಾಯುತ್ತಿದ್ದ ಡ್ರೈವರುಗಳು ಮತ್ತು ಅವರ ಸಹಾಯಕರು ದಡಬಡ ಬಂದರು. ಮಾದೇವನ ಕಿವಿ ಬಿಸಿಯಾಯಿತು. ಶಿವನ ಕಡೆ ತಿರುಗಿ 'ಮೇಸ್ತ್ರಿ ಬಂದರು' ಅಂದ. ಆದರೆ ಬಂದವನು ಪಿ.ಎ. ಅವನು ಡ್ರೈವರುಗಳ ಗುಂಪಿಗೆ ಏನೊ ಹೇಳಿ ಮತ್ತೆ ಭರ್ರನೆ ಹೊರಟ. ಶಿವ ಅತ್ತ ಹೊರಡಬೇಕಿದ್ದವನು ಹಂಗೇ ನೀತ. ಮಾದೇವ ಕಳವಳಗೊಂಡು ಅತ್ತ ಕೈಚಾಚಿ 'ನನ್ನ ಕೂಲಿ' ಅಂತ ದನಿ ಎತ್ತಿ ಕೂಗಿದ. ಗದ್ದಲದಲ್ಲಿ ಅದು ಪಿ.ಎಗೆ ತಲುಪಲಿಲ್ಲ. ಇವನಿಗೆ ಪಿ.ಎ ಯಾರು, ಮೇಸ್ತ್ರಿ ಯಾರು ಅಂತ ಗೊತ್ತಿರಲಿಲ್ಲ.

ಶಿವ, ಮಾದೇವನ ತಳಮಳವನ್ನು ಕಮ್ಮಿ ಮಾಡುವವನಂತೆ 'ನೋಡಪ್ಪ ನೀ ಬಂದು ಮೂರು ತಿಂಗಳು ಆಯ್ತು ಅಂತಿ, ಪಿ.ಎ ಯಾರು. ಮೇಸ್ತ್ರಿ ಯಾರು ಅಂತ ಗೊತ್ತಿಲ್ಲವಾ? ಈ ಪಿ.ಎ ಮೇಸ್ತ್ರಿಗೆ ಲೆಕ್ಕ ಕೊಡ್ತಾನೆ. ಆ ಮೇಸ್ತ್ರಿ ಸಬ್ ಕಂಟ್ರಾಕ್ಟರಿಗೆ ವರದಿ ಮಾಡ್ತಾನೆ. ಆ ಸಬ್ ಕಂಟ್ರಾಕ್ಟರಿಗೆ ಗುತ್ತಿಗೆದಾರ ಹಣ ಬಿಡುಗಡೆ ಮಾಡ್ತಾನೆ. ಹಣ ಹಿಂಗೆ ಹರಿದು ಹರಿದು ನಮ್ಮ ಕೈ ಸೇರೊ ಹೊತ್ತಿಗೆ ಪುಡಿಗಾಸಾಗಿರ್ತದೆ. ಈ ನಗರದ ಕಸದ ಗುತ್ತಿಗೆ ವ್ಯವಹಾರ ಎಷ್ಟು ಕೋಟಿ ಅಂತ ಗೊತ್ತಾ?', ಮಾದೇವನಿಗೆ ಕೋಟಿಗೀಟಿ ರೋಮಾಂಚನ ಗೊಳಿಸಲಿಲ್ಲ. ಅವ್ವನ ಹೊಟ್ಟೆಹುಣ್ಣು ನಿವಾರಣೆಗೆ ಈ ಕೆಲಸ ನೆಚ್ಚಿ ಮಾಡಿದ್ದೀನಿ. ಒಂದು ವೇಳೆ ಶಿವ ಹೇಳಿದಂಗೆ ಹಣ ಕೈಯಿಂದ ಕೈಗೆ ಅಂತು ತನ್ನ ಕೂಲಿ ಹಣ ತಲುಪದೆ ಹೋದರೆ?

ಮಾದೇವನಿಗೆ ಆತಂಕದಿಂದ ಎದೆ ಹೊಡೆದು ಕೊಳ್ಳತೊಡಗಿತು. ಈ ಶಿವನೇ ತನಗೀಗ ಆಪದ್ಬಾಂಧವ ಅಂದುಕೊಂಡು 'ಅಣ್ಣಾ ನಿಂಗೆ ನನ್ನ ಕಷ್ಟ ಏನು ಅಂತ ಗೊತ್ತಾಗದೆ. ನನ್ನ ಕೂಲಿ ಹಣ ಬೇಕು. ನೀನೇ ಹೇಳಿ ಕೊಡಸಣ್ಣ. ನಮ್ಮ ಡ್ರೈವರಣ್ಣನಿಗೆ ಕೇಳಿದ್ರೆ ಅವನ ಕಿವೀಗೇ ಹೋಗೋದಿಲ್ಲ. ಎರಡ್ಮೂರು ದಿನದಿಂದ ನನ್ನವ್ವ ಕಣ್ಣಿಗೆ ಕಟ್ಟಿಬುಟ್ಟವಳೆ. ನನ್ನ ಮನಸ್ಸು ನಿಲ್ತಾಯಿಲ್ಲ. ನನ್ನ ಕೂಲಿ ಈಸ್ಕೊಟ್ಟು ಪುಣ್ಯ ಕಟ್ಕೊ' ಮತ್ತೆ ಗೋಗರೆಯತೊಡಗಿದ.

ಶಿವನಿಗೆ ಈ ಮಾದೇವನ ಕಷ್ಟ ತನ್ನ ಕಷ್ಟ ಅನ್ನುವಷ್ಟು ಪರಿಣಾಮ ಬೀರಿತು. ಆದರೆ ಮಾದೇವನ ಭಯ, ತೊಳಲಾಟದಿಂದಾಗಿ ಏನು ಮಾಡಬೇಕು ಅಂತ ತಿಳಿಯದೇ ಬಾಯಿ ಕಟ್ಟಿತು. ಅವನಿಗೆ ಈ ಮಾದೇವನ ಹೆಸರು ಮೇಸ್ತ್ರಿ ಲೆಕ್ಕದ ರಿಜಿಸ್ಟರಿನಲ್ಲಿ ಸೇರಿಲ್ಲ ಅನ್ನುವ ಗುಮಾನಿ ಗಟ್ಟಿಯಾಗತೊಡಗಿತ್ತು. ನಮ್ಮ ದುಡಿಮೆ ಮೇಲೆ ಅವರ ಸಂಪಾದನೆನಾ? ಈ ಸಂಗತಿಯನ್ನು ಮಾದೇವನಿಗೆ ತಿಳಿ ಹೇಳಲು ಬಾಯಿ ಬರಲಿಲ್ಲ. ಆದರೆ ಮನಸ್ಸು ಮಿಡಿಯುತ್ತಿತ್ತು. ಅಷ್ಟರಲ್ಲಿ ಆ ಕಡೆಯಿಂದ ಎರಡು ಕಾರುಗಳು ಬಂದವು. ಒಂದು ರಸ್ತೆ ಬದಿಯಲ್ಲೇ ನಿಂತಿತು. ಇನ್ನೊಂದು ದೂಳೆಬ್ಬಿಸಿಕೊಂಡು ಪಾಳಿನೊಳಗಡೆಗೆ ಬಂತು.

ಮಂಕಾಗಿ ನಿಂತಿದ್ದ ಮಾದೇವ ಚುರುಕಾದ. ಈಗ ಮೇಸ್ತ್ರಿ, ಕಂಟ್ರಾಕ್ಟರ್‌ದಾರ ಬಂದಿರುತ್ತಾರೆ ಅಂತ 'ಅಣ್ಣಾ ನೀನೂ ಬಾ' ಅಂದವನೇ ಅತ್ತ ಲಗುಬಗನೆ ಧಾವಿಸಿದ. ಶಿವ ಪ್ಯಾಂಟಿನ ಜೇಬಿನಲ್ಲಿದ್ದ ಲೆಕ್ಕದ ಚೀಟಿಯನ್ನು ತೆಗೆದು ಮತ್ತೆ ನೋಡಿದ. ತಾನು ನಾಕು ದಿವಸ ಮಾತ್ರ ಆಬ್‌ಸೆಂಟ್ ಅನ್ನುವುದನ್ನು ಖಾತ್ರಿ ಮಾಡಿಕೊಂಡ. ಕೆಲಸ ಮಾಡಿಸಿಕೊಳ್ಳುವ ಜೂರತ್ತು ಕೆಲಸದ ಕೂಲಿ ಕೊಡುವಾಗ ಸಂಪಾದನೆದಾರರಿಗೆ ಇರುವುದಿಲ್ಲ. ಏನು ಜನ? ಅಂತ ಶಪಿಸುತ್ತಾ ತಾನೂ ಕಾರಿನ ಕಡೆಗೆ ಹೆಜ್ಜೆಯೂರತೊಡಗಿದ.

ಒಳ ಬಂದು ಕಾರು ನಿಂತಿದ್ದರೂ ಅದು ಕೆದರಿದ್ದ ದೂಳು ಇನ್ನೂ ನಿಂತಿರಲಿಲ್ಲ. ನಿಧಾನಕ್ಕೆ ಕಾರಿನ ಗ್ಲಾಸು ಇಳಿಸಿ ದೂಳು ಕಮ್ಮಿಯಾಗುತ್ತಿರುವುದನ್ನು ಗ್ಯಾರಂಟಿ ಮಾಡಿಕೊಂಡು ಪಿ.ಎ ಇಳಿದ. ರೂಢಿಯಂತೆ ಪಿ.ಎ ಇಳಿದ ಮೇಲೆ ಬಿಳಿ ದಿರಿಸಿನ ಮೇಸ್ತ್ರಿ ಇಳಿಯಬೇಕು. ಆದರೆ ಮತ್ಯಾರೂ ಕಾರಿನಿಂದ ಇಳಿಯಲಿಲ್ಲ. ಮಾದೇವನಂತೆ ಉಳಿದ ಡ್ರೈವರುಗಳು, ಸಹಾಯಕರು ಮೇಸ್ತ್ರಿಗಾಗಿ ಕಾಯುತ್ತಿದ್ದರು. ಆ ಮೇಸ್ತ್ರಿ ಗಾಳಿ ಬೀಸಿದಂಗೆ ಆಗಾಗ ಬರುತ್ತಿದ್ದ. ಬಟವಾಡೆಯ ದಿನ ಮಾತ್ರ ಇರುತ್ತಿದ್ದ.

ಎಲ್ಲರೂ ಕಾತರ, ಕಳವಳಗೊಂಡರು. ಪಿ.ಎ ಹತ್ತಾರು ಹೆಜ್ಜೆ ಮುಂದೆ ಬಂದು 'ನಮ್ಮ ವಾರ್ಡಿನ ಲಾರಿಗೆ ಆಕ್ಸಿಡೆಂಟಾಗಿ ಡ್ರೈವರಿಗೆ ಪಬ್ಲಿಕ್ ಚೆನ್ನಾಗಿ ಥಳಿಸಿಬಿಟ್ಟಿದ್ದಾರೆ. ಉಳಿದ ಲಾರಿ ಡ್ರೈವರುಗಳು ಯಾರೂ ಬರುತ್ತಿಲ್ಲ. ಇವತ್ತು ಮೇಸ್ತ್ರಣ್ಣನೂ ಬರುತ್ತಿಲ್ಲ. ಗ್ರಾಂಟು ಇನ್ನೂ ಬಂದಿಲ್ಲ ಅನ್ನುತ್ತಿದ್ದು, ಯಜಮಾನ್ರ ಹತ್ರ ಹೋಗಿರಬೇಕು. ನಿಮ್ಮ ಆಟೋಗಳೆಲ್ಲ ಇಲ್ಲೆ